# ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ.

# ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ

**ಸಿ.ಸಿ.ನಂ.ಃ 611/13**

ಸಿ.ಡಬ್ಲ್ಯು. 11

ಪಿ.ಡಬ್ಲ್ಯು. 10

ಸಾಕ್ಷಿದಾರರ ಹೆಸರು : ನಾಗರತ್ನಾ ಅಗರವಾಡೇಕರ

ತಂದೆಯ/ಗಂಡನ ಹೆಸರು : ಪಾಂಡುರಂಗ ಅಗರವಾಡೇಕರ

ವಯಸ್ಸು : 38 ವರ್ಷ

ಉದ್ಯೋಗ : ಮನೆಕೆಲಸ

ವಾಸ್ತವ್ಯ : ಕಾರವಾರ

**(ಇಂದು ದಿನಾಂಕಃ 24-04-2019 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)**

## ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-

ಚಾ.ಸಾ.1 ನನ್ನ ಚಿಕ್ಕಮ್ಮ. ನನಗೆ ಆರೋಪಿತರ ಪರಿಚಯ ಇದೆ. ಅವರಿಬ್ಬರು 2009 ರಲ್ಲಿ ಚಾ.ಸಾ. 9 ರವಳ ಶಾಲಾ ಪ್ರಮಾಣಪತ್ರಗಳನ್ನು ಪಡೆದುಕೊಳ್ಳಲು ನಮ್ಮ ಮನೆಗೆ ಬಂದಿದ್ದರು. ಆರೋಪಿತರು ನನ್ನ ತಾಯಿ ಚಾ.ಸಾ. 8 ಮತ್ತು ನಮ್ಮ ಬಳಿ ಆರೋಪಿತರು ರೂ. 3,50,000-00 ಪಾವತಿಸಿದರೆ ನನಗೆ ನೌಕರಿ ಕೊಡಿಸುವುದಾಗಿ ಭರವಸೆ ನೀಡಿದರು. ನಾನು ಮತ್ತು ಚಾ.ಸಾ. 8 ರವರು ನಗದಾಗಿ ರೂ. 65,000-00 ವನ್ನು ಆರೋಪಿತರಿಗೆ ಪಾವತಿ ಮಾಡಿರುತ್ತೇವೆ. ಸದ್ರಿ ಸಮಯ ನಾನು ಪ್ರಥಮ ದರ್ಜೆ ಸಹಾಯಕಳಾಗಿ ಪರೀಕ್ಷೆಯನ್ನು ಬರೆದಿದ್ದೆನು. ಸದ್ರಿ ಪರೀಕ್ಷೆಯ ಹಾಲ್‌ಟಿಕೇಟ್‌ನ್ನು ನೌಕರಿ ಕೊಡಿಸುವ ಸಲುವಾಗಿ 1ನೇ ಆರೋಪಿತೆ ತೆಗೆದುಕೊಂಡು ಹೋಗಿರುತ್ತಾಳೆ. ಆರೋಪಿತರು ಭರವಸೆ ನೀಡಿದಂತೆ ನನಗೆ ನೌಕರಿ ಕೊಡಿಸಿಲ್ಲ ಮತ್ತು ನಾವು ಪಾವತಿ ಮಾಡಿದ ಹಣವನ್ನು ಮರುಪಾವತಿ ಮಾಡಿಲ್ಲ, ಈ ರೀತಿ ಆರೋಪಿತರು ನಮಗೆ

ಮೋಸ ಮಾಡಿರುತ್ತಾರೆ. ಸದ್ರಿ ಹಾಲ್‌ಟಿಕೇಟ್‌ನ್ನು ನಾನು ಪೊಲೀಸರ ತನಿಖೆ ಸಮಯ ನೋಡಿರುವುದಿಲ್ಲ, ಸಾಕ್ಷಿದಾರರಿಗೆ ಸದ್ರಿ ಹಾಲ್‌ಟಿಕೇಟ್‌ನ ದೃಢೀಕೃತ ನಕಲನ್ನು ತೋರಿಸಲಾಗಿ ಸಾಕ್ಷಿದಾರರು ಅದನ್ನು ಒಪ್ಪಿಕೊಂಡಿದ್ದು ಸದ್ರಿ ದಾಖಲಾತಿಯನ್ನು ನಿ.ಪಿ.೮ ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಗೈರು-ಹಾಜರಿದ್ದು ಶ್ರೀ ವಿ.ಜಿ.ಎಚ್. ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ನ್ಯಾ.ದ ಸಮಯವೂ ಕೂಡ ಅಭಾವ ಇರುವುದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು..)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಜೆ.ಎಂ.ಎಫ್.ಸಿ. ಕುಮಟಾ.